# KANNADA SPECIAL LECTURE

**19-09-2019**










## “ಲಕ್ಷ್ಮೀಶನ ಜೈಮಿನಿ ಭಾರತ – ಒಂದು ಅವಲೋಕನ” – ವಿಶೇಷ ಉಪನ್ಯಾಸ

“ಕೃಷ್ಣ ಭಕ್ತಿಗೆ, ಕೃಷ್ಣ ಸಾಕ್ಷಾತ್ಕಾರಕ್ಕೆ ಶುದ್ಧ ಭಕ್ತಿಯೊಂದೇ ಸಾಕು ಎಂಬುದು ಲಕ್ಷ್ಮೀಶನ ಜೈಮಿನಿ ಭಾರತದ ನಿಲುವಾಗಿದೆ” – ಎಂದು ಮೈಸೂರಿನ ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಕೆ.ತಿಮ್ಮಯ್ಯ ಅವರು ಅಭಿಪ್ರಾಯ ಪಟ್ಟರು.

ದಿನಾಂಕ:೧೯.೦೯.೨೦೧೯ರ ಗುರುವಾರದಂದು ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ “ಲಕ್ಷ್ಮೀಶನ ಜೈಮಿನಿ ಭಾರತ – ಒಂದು ಅವಲೋಕನ” ಎಂಬ ವಿಷಯದ ಬಗ್ಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡುತ್ತಿದ್ದರು. ಕೃಷ್ಣ ಭಕ್ತಿಯ ಮಹತ್ವವನ್ನು ಸಾರುವುದು ಒಟ್ಟು ಜೈಮಿನಿ ಭಾರತದ ಪ್ರಮುಖ ಆಶಯವಾಗಿದ್ದು ಅಂದಿನ ಯುಗಧರ್ಮವಾದ ಭಾಗವತ ಧರ್ಮವೂ ಸಹ ಇದೇ ತತ್ವವನ್ನು ಪ್ರತಿಪಾದಿಸಿದೆ. ಭಕ್ತಿಯೊಂದೇ ಮುಕ್ತಿ ಸಾಧನವಾಗಿದ್ದು, ಪರಾಕ್ರಮಕ್ಕಿಂತ ಪರಮ ಭಕ್ತಿ ಹೇಗೆ ಮೂಡಿಬಂದಿದೆ ಎಂಬ ಅಂಶವನ್ನು ಮಯೂರ ಧ್ವಜನ ಪ್ರಸಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ತಮ್ಮ ವಿದ್ವತ್ಪೂರ್ಣ ಉಪನ್ಯಾಸವನ್ನು ಡಾ.ಕೆ.ತಿಮ್ಮಯ್ಯನವರು ನೀಡಿದರು.

ಪ್ರಸ್ತುತ ಉಪನ್ಯಾಸದಲ್ಲಿ ಕಾಲೇಜಿನ ಕನ್ನಡ ವಿಭಾದ ಮುಖ್ಯಸ್ಥರಾದ ಡಾ.ಧನಂಜಯ ಪಾಲಹಳ್ಳಿ ಹಾಗೂ ವಿಶೇಷ ಉಪನ್ಯಾಸ ಮಾಲೆಯ ಸಂಚಾಲಕಾರದ ಡಾ.ಸಿ.ಆರ್.ಸಿಂಧು ಅವರು ಇದೇ ಸಂದರ್ಭದಲ್ಲಿ ಹಾಜರಿದ್ದರು. ಚಿರಂತನ ಶಂಕರ ಧೂಳಿ ಅವರು ಲಕ್ಷ್ಮೀಶನ ಜೈಮಿನಿ ಭಾರತದ ಷಟ್ಪದಿ ಚರಣಗಳನ್ನು ಗಮಕ ವಾಚಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಡಾ.ಶ್ರೀನಿವಾಸ್ ಅವರು ಸ್ವಾಗತಿಸಿದ ಕಾರ್ಯಕ್ರಮವನ್ನು ಶ್ರೀ.ಜೆ.ಮಂಜುರವರು ನಿರೂಪಿಸಿ ವಂದಿಸಿದರು.

## Report in English

A Special Lecturer on ‘Lakshmisha’s Jaimini Bharatha- An Overview’ was organized by the department of Kannada of Vidyavardhaka First grade college, Mysuru on 19 Thursday 2019.

The Lecture was delivered by Dr.Thimmaiah, Associate Professor Department of Kannada, Maharaja College, Mysuru. The Scholar conveyed the incidents of 'Mayuradwaja' along with the story of devotion to lord Krishna in Lakshmisha's epic Jaimini Bharatha to the students.